ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

# ಕರ್ನಾಟಕ ಸರ್ಕಾರ

## ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2014–15 : ದಿನಾಂಕ: 28–11–2014

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1 | ಡಾ: ರಾಜ್‌ಕುಮಾರ್ ಸ್ಮಾರಕದ ಲೋಕಾರ್ಪಣೆ ಸಮಾರಂಭ:<br>ಉದ್ಘಾಟನೆ:<br><br>ಶ್ರೀ ಸಿದ್ಧರಾಮಯ್ಯ,<br>ಮುಖ್ಯಮಂತ್ರಿಗಳು, ಕರ್ನಾಟಕ<br><br>ಮುಖ್ಯ ಅತಿಥಿಗಳು:<br><br>ಶ್ರೀ ಡಿ.ವಿ. ಸದಾನಂದಗೌಡ,<br>ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಖಾತೆ ಸಚಿವರು, ಭಾರತ ಸರ್ಕಾರ<br><br>ಶ್ರೀ ರಾಮಲಿಂಗಾರೆಡ್ಡಿ,<br>ಸಾರಿಗೆ ಸಚಿವರು,<br><br>ಶ್ರೀ ಆರ್. ರೋಷನ್ ಬೇಗ್,<br>ಮೂಲಕ ಸೌಕರ್ಯ ಅಭಿವೃದ್ಧಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಹಾಗೂ ಹಜ್ ಖಾತೆ ಸಚಿವರು<br><br>ವಿ.ಸೂ.<br>• ಮಾಧ್ಯಮದವರಿಗೆ ರಾಜ್ ಸ್ಮಾರಕ ಗೇಟ್‌ನಿಂದ ಪ್ರವೇಶ ಕಲ್ಪಿಸಲಾಗಿದೆ. (ನಕ್ಷೆ ಲಗತ್ತಿಸಿದೆ.) | 29–11–2014<br>ಶುಕ್ರವಾರ<br>ಬೆಳಗ್ಗೆ<br>10–30 ಗಂಟೆಗೆ | ಶ್ರೀ ಕಂಠೀರವ ಸ್ಟುಡಿಯೋ ಆವರಣ,<br>ಕೆಂಗೇರಿ–ಹೆಬ್ಬಾಳ ವರ್ತುಲ ರಸ್ತೆ,<br>ಕಂಠೀರವ ನಗರ,<br>ಬೆಂಗಳೂರು |

| | | | |
|---|---|---|---|
| | • ಮಾಧ್ಯಮ ಪ್ರತಿನಿಧಿಗಳು ತಾವು ಪಡೆದಿರುವ ಪ್ರವೇಶ ಪತ್ರದೊಂದಿಗೆ ಆಗಮಿಸಲು ಕೋರಿದೆ ಹಾಗೂ ಭದ್ರತಾ ಅಧಿಕಾರಿಗಳು ಪರಿಶೀಲಿಸುವ ವೇಳೆ ಪ್ರವೇಶಪತ್ರವನ್ನು ತೋರಿಸಲು ಕೋರಿದೆ. | | |
| 2 | ಮಕ್ಕಳ ರಕ್ಷಣೆ ಕುರಿತ ಬೃಹತ್ ಜಾಗೃತಿ ಮೇಳ: | 29-11-2014<br>ಶುಕ್ರವಾರ<br>ಬೆಳಗ್ಗೆ<br>11-00 ಗಂಟೆಗೆ | ಬನ್ನಪ್ಪ ಪಾರ್ಕ್ ಮೈದಾನ, ಹಲಸೂರುಗೇಟ್ ಪೋಲೀಸ್ ಠಾಣೆ ಹತ್ತಿರ, ಸೇಂಟ್ ಮಾರ್ಥಾಸ್ ಆಸ್ಪತ್ರೆ ಎದುರು, ಬೆಂಗಳೂರು |

ನಿರ್ದೇಶಕರ ಪರವಾಗಿ

## <u>ಪತ್ರಿಕಾ ಪ್ರಕಟಣೆ</u>

# ಡಾ: ರಾಜ್‌ಕುಮಾರ್ ಸ್ಮಾರಕದ ಲೋಕಾರ್ಪಣೆ ಸಮಾರಂಭ

ಬೆಂಗಳೂರು, 28 ನೇ ನವೆಂಬರ್ (ಕರ್ನಾಟಕ ವಾರ್ತೆ)

ಡಾ: ರಾಜ್‌ಕುಮಾರ್ ಪ್ರತಿಷ್ಠಾನದ ವತಿಯಿಂದ ಡಾ: ರಾಜ್‌ಕುಮಾರ್ ಸ್ಮಾರಕದ ಲೋಕಾರ್ಪಣೆ ಸುಂದರ ಅವಿಸ್ಮರಣೀಯ ಸಮಾರಂಭವನ್ನು ನವೆಂಬರ್ 29 ರಂದು ಬೆಳಗ್ಗೆ 10-30 ಗಂಟೆಗೆ ಬೆಂಗಳೂರು ಕಂಠೀರವ ನಗರದ ಕೆಂಗೇರಿ-ಹೆಬ್ಬಾಳ ವರ್ತುಲ ರಸ್ತೆ ಶ್ರೀ ಕಂಠೀರವ ಸ್ಟುಡಿಯೋ ಆವರಣದಲ್ಲಿ ಏರ್ಪಡಿಸಲಾಗಿದ್ದು ರಾಜ್ಯದ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ಉದ್ಘಾಟನೆ ಮಾಡುವರಲ್ಲದೆ ಡಾ: ರಾಜ್‌ಕುಮಾರ್ ಪುತ್ಥಳಿಯ ಅನಾವರಣ ಮಾಡಲಾಗುವುದು. ರಾಜ್ಯದ ಪಾಲಿಗೆ ಇದು ಗೌರವದ ಕ್ಷಣ ಎಂದು ಕನ್ನಡ ಸಂಸ್ಕೃತಿ ಮತ್ತು ವಾರ್ತಾ ಹಾಗೂ ಸಾರ್ವಜನಿಕ ಸಂಪರ್ಕ ಇಲಾಖೆಯ ಪ್ರಧಾನ ಕಾರ್ಯದರ್ಶಿ ಡಾ: ಶಾಲಿನಿ ರಜನೀಶ್ ಅವರು ತಿಳಿಸಿದರು.

ಅವರು ಇಂದು ಬೆಂಗಳೂರು ವಾರ್ತಾ ಸೌಧದಲ್ಲಿ ಪತ್ರಕರ್ತರನ್ನುದ್ದೇಶಿಸಿ ಮಾತನಾಡುತ್ತಿದ್ದರು. ಸಮಾರಂಭದ ಮುಖ್ಯ ಅತಿಥಿಗಳಾಗಿ ಭಾರತ ಸರ್ಕಾರದ ಕಾನೂನು ಹಾಗೂ ಸಂಸದೀಯ ವ್ಯವಹಾರ ಸಚಿವ ಶ್ರೀ ಡಿ.ವಿ. ಸದಾನಂದಗೌಡ, ಕರ್ನಾಟಕದ ಸಚಿವರುಗಳಾದ ಶ್ರೀ ಆರ್. ರೋಷನ್ ಬೇಗ್, ಶ್ರೀ ರಾಮಲಿಂಗಾರೆಡ್ಡಿ, ಡಾ: ಎಂ.ಹೆಚ್. ಅಂಬರೀಶ್, ಶ್ರೀಮತಿ ಉಮಾಶ್ರೀ, ಶ್ರೀ ಕೆ.ಜೆ. ಜಾರ್ಜ್, ಶ್ರೀ ಕೃಷ್ಣಭೈರೇಗೌಡ ಹಾಗೂ ಶ್ರೀ ದಿನೇಶ್ ಗುಂಡೂರಾವ್ ಅವರುಗಳು ಪಾಲ್ಗೊಳ್ಳುವರು. ಅಲ್ಲದೆ ಕರ್ನಾಟಕದ ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷ ಶ್ರೀ ಹೆಚ್.ಡಿ. ಗಂಗರಾಜು, ಚಲನಚಿತ್ರ ನಿರ್ಮಾಪಕರು ಹಾಗೂ ವಿತರಕರಾದ ಶ್ರೀಮತಿ ಪಾರ್ವತಮ್ಮ ರಾಜ್‌ಕುಮಾರ್ , ವಿಧಾನ ಪರಿಷತ್ ಸದಸ್ಯರುಗಳಾದ ಶ್ರೀ ಜಗ್ಗೇಶ್, ಶ್ರೀಮತಿ ತಾರಾ ಅನುರಾಧ, ಡಾ: ಜಯಮಾಲ, ಶ್ರೀ ಸಂದೇಶ್ ನಾಗರಾಜ್, ಶ್ರೀ ಇ. ಕೃಷ್ಣಪ್ಪ ಮತ್ತು ನಂದಿನಿ ಬಡಾವಣೆಯ ಬಿ.ಬಿ.ಎಂ.ಪಿ. ಸದಸ್ಯ ಶ್ರೀ ನಾಗರಾಜ್, ಪ್ರತಿಷ್ಠಾನದ ಸದಸ್ಯರಾದ ಪ್ರೊ. ಬರಗೂರು

ರಾಮಚಂದ್ರಪ್ಪ, ಖ್ಯಾತ ನಟ ನಿರ್ಮಾಪಕ ಶ್ರೀ ರಾಘವೇಂದ್ರ ರಾಜ್‌ಕುಮಾರ್, ಶ್ರೀ ರಾಕ್‌ಲೈನ್ ವೆಂಕಟೇಶ್ ಅವರುಗಳು ಪಾಲ್ಗೊಳ್ಳುವರು ಎಂದು ಅವರು ತಿಳಿಸಿದರು.

ಸಮಾರಂಭದ ಅಧ್ಯಕ್ಷತೆಯನ್ನು ಮಹಾಲಕ್ಷ್ಮಿಪುರ ವಿಧಾನ ಸಭಾ ಕ್ಷೇತ್ರದ ಶಾಸಕ ಶ್ರೀ ಗೋಪಾಲಯ್ಯ ಅವರು ವಹಿಸುವರು. ವಿಶೇಷ ಆಹ್ವಾನಿತರಾಗಿ ಖ್ಯಾತ ಚಲನಚಿತ್ರ ನಟರಾದ ಡಾ: ಬಿ. ಸರೋಜಾದೇವಿ, ಶ್ರೀ ರಜನಿಕಾಂತ್, ಶ್ರೀ ಚಿರಂಜೀವಿ ಮತ್ತು ಶ್ರೀ ಮುಮ್ಮುಟಿ ಅವರುಗಳು ಪಾಲ್ಗೊಳ್ಳುವರು ಎಂದು ಸಮಾರಂಭದ ವಿವರ ನೀಡಿದರು.

ಡಾ: ರಾಜ್‌ಕುಮಾರ್ ಅವರ ಜೀವನಚರಿತ್ರೆ ಕುರಿತ ಸಾಕ್ಷ್ಯಚಿತ್ರವನ್ನು ಮುಖ್ಯಮಂತ್ರಿಗಳು ಇದೇ ಸಂದರ್ಭದಲ್ಲಿ ಬಿಡುಗಡೆ ಮಾಡುವರಲ್ಲದೆ ಡಾ: ರಾಜ್‌ಕುರಿತ ಛಾಯಾಚಿತ್ರಗಳ ಸಂಗ್ರಹದ ಪುಸ್ತಕವನ್ನು ಸಹ ಬಿಡುಗಡೆ ಮಾಡಲಾಗುವುದು.

ವಿಶೇಷ ಬಸ್ ವ್ಯವಸ್ಥೆ:

ಸಮಾರಂಭದ ಸ್ಥಳಕ್ಕೆ ನಗರದ ವಿವಿಧ ಭಾಗಗಳಿಂದ ಸಾರ್ವಜನಿಕರಿಗಾಗಿ ವಿಶೇಷ ಬಸ್ ವ್ಯವಸ್ಥೆ ಮಾಡಲಾಗಿದೆ ಎಂದು ಡಾ: ಶಾಲಿನಿ ರಜನೀಶ್ ಅವರು ತಿಳಿಸಿದರು.

ಬೆಂಗಳೂರು ಅರಮನೆಯ ಆವರಣದಲ್ಲಿ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯಿಂದ ಸಂಜೆ 6-00 ಗಂಟೆಗೆ ವಿಶೇಷ ಮನೋರಂಜನಾ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ ಎಂದು ಕನ್ನಡದ ಖ್ಯಾತ ನಟ ಹಾಗೂ ನಿರ್ಮಾಪಕ ಶ್ರೀ ರಾಘವೇಂದ್ರ ರಾಜ್‌ಕುಮಾರ್ ಪತ್ರಿಕಾಗೋಷ್ಠಿಯಲ್ಲಿ ಸಂಜೆ ಕಾರ್ಯಕ್ರಮದ ವಿವರ ನೀಡಿದರು.

ಬೆಳಗ್ಗೆ ಸ್ಮಾರಕ ಉದ್ಘಾಟನೆಯ ಸಂದರ್ಭದಲ್ಲಿ ಡಾ. ರಾಜ್‌ಕುಮಾರ್ ಅವರ ಹುಟ್ಟೂರಿನಿಂದ ಹೊರಟಿರುವ ದೀಪವನ್ನು ಸ್ಮಾರಕದ ಮುಂದೆ ಬೆಳಗಲಾಗುವುದು. ಹಾಗೂ ಮೇರುನಟನ ಸಮಾಧಿಗೆ ಪೂಜೆ ಸಲ್ಲಿಸಲಾಗುವುದು. ನಂತರ ಸಭಾ ಕಾರ್ಯಕ್ರಮ ನಡೆಯಲಿದೆ ಎಂದು ಅವರು ಮಾಹಿತಿ ನೀಡಿದರು.

ಡಾ. ರಾಜ್‌ಕುಮಾರ್ ಸ್ಮಾರಕದ ಲೋಕಾರ್ಪಣೆಯ ಸಂದರ್ಭದಲ್ಲಿ ಅಭಿಮಾನಿಗಳು ಯಾವುದೇ ಅಹಿತಕರ ಘಟನೆಗಳಿಗೆ ಆಸ್ಪದ ನೀಡದೆ, ಶಾಂತಚಿತ್ತರಾಗಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕು ಎಂದು ಮನವಿ ಮಾಡಿದರು.

*ವಿಶೇಷ ಬಿಗಿ ಪೊಲೀಸ್ ಬಂದೋಬಸ್ತ್:*

ಡಾ: ರಾಜ್‌ಕುಮಾರ್ ಸ್ಮಾರಕದ ಲೋಕಾರ್ಪಣೆ ಸಮಾರಂಭಕ್ಕಾಗಿ ಹಾಗೂ ಅರಮನೆ ಆವರಣದಲ್ಲಿ ಸಂಜೆ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮಗಳಿಗಾಗಿ ವಿಶೇಷ ಪೊಲೀಸ್ ಬಿಗಿ ಬಂದೋಬಸ್ತ್ ಏರ್ಪಡಿಸಲಾಗಿದೆ ಎಂದು ನಗರ ಪೊಲೀಸ್ ಜಂಟಿ ಆಯುಕ್ತ ಶ್ರೀ ಅಲೋಕ್‌ಕುಮಾರ್ ಅವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಬಿಗಿ ಪೊಲೀಸ್ ಬಂದೋಬಸ್ತ್‌ಗಾಗಿ 5 ಜನ ಡಿಸಿಪಿಗಳು 11 ಎಸಿಪಿಗಳು 45 ಇನ್ಸ್‌ಪೆಕ್ಟರ್‌ಗಳು, 1000 ಪೊಲೀಸ್ ಸಿಬ್ಬಂದಿ 20 ಪ್ಲಟೂನ್ ಪೊಲೀಸ್ ಮೀಸಲು ಪಡೆ, ಕ್ಷಿಪ್ರ ಕಾರ್ಯಾಚರಣೆ ಪಡೆಗಳನ್ನು ನಿಯೋಜಿಸಿದ್ದು ಈ ಸುಂದರ ಸಮಾರಂಭವು ಯಾವುದೇ ತೊಂದರೆ ಹಾಗೂ ಅಹಿತಕರ ಘಟನೆಗಳಿಲ್ಲದೆ ಶಾಂತಿಯುತವಾಗಿ ನಡೆಸಲು ಸಮಾಜದ ಎಲ್ಲ ವರ್ಗದ ಜನರು ಸಹಕರಿಸಬೇಕು. ಸಮಾರಂಭದ ಸ್ಥಳಗಳಲ್ಲಿ ಆಗುವ ತೊಂದರೆಗಳ ಪರಿಹಾರಕ್ಕಾಗಿ ಸ್ಥಳದಲ್ಲಿಯೇ ಹೆಲ್ಪ್ ಡೆಸ್ಕ್‌ಗಳನ್ನು ತೆರೆಯಲಾಗುವುದು ಎಂದು ಅವರು ತಿಳಿಸಿದರು.

ಬೆಳಗ್ಗಿನ ಕಾರ್ಯಕ್ರಮಕ್ಕೆ ಆಹ್ವಾನಿತರಿಗೆ ಪ್ರಸಾದ್ ಲ್ಯಾಬ್ ದ್ವಾರದ ಮೂಲಕ, ಗಣ್ಯಾತಿಗಣ್ಯರಿಗೆ ಶ್ರೀ ಕಂಠೀರವ ಸ್ಟುಡಿಯೋಸ್ ಮುಖ್ಯದ್ವಾರ ಹಾಗೂ ಸಾರ್ವಜನಿಕರಿಗೆ ಹೊರವರ್ತುಲ ರಸ್ತೆಯಲ್ಲಿರುವ ಕಂಠೀರವ ಸ್ಟುಡಿಯೋಸ್ ದ್ವಾರದ ಮೂಲಕ ಪ್ರವೇಶಾವಕಾಶ ಕಲ್ಪಿಸಲಾಗಿದೆ.
ಅಂತೆಯೇ ಸಂಜೆ ಅರಮನೆ ಮೈದಾನದಲ್ಲಿ ನಡೆಯಲಿರುವ ಕಾರ್ಯಕ್ರಮಕ್ಕೆ ಸಾರ್ವಜನಿಕರಿಗೆ ದೂರದರ್ಶನ ಕೇಂದ್ರದ ಮುಂಭಾಗದಲ್ಲಿರುವ ಸರ್ಕಸ್ ಗೇಟ್ ಮೂಲಕ ಪ್ರವೇಶಾವಕಾಶ ಕಲ್ಪಿಸಲಾಗಿದೆ. ಸಾರ್ವಜನಿಕರು ಸಂಜೆ 4.00 ಗಂಟೆಗೇ ಆಗಮಿಸಿ ಆಸೀನರಾಗುವಂತೆ ಅವರು ವಿನಂತಿಸಿದರು.

ಪತ್ರಿಕಾಗೋಷ್ಠಿಯಲ್ಲಿ ವಾರ್ತಾ ಹಾಗೂ ಸಾರ್ವಜನಿಕ ಸಂಪರ್ಕ ಇಲಾಖೆಯ ನಿರ್ದೇಶಕ ಶ್ರೀ ಎನ್.ಆರ್. ವಿಶುಕುಮಾರ್, ಜಂಟಿ ನಿರ್ದೇಶಕರಾದ ಶ್ರೀ ಆರ್.ಕೆ. ಶಿವರಾಂ, ಶ್ರೀ ಎನ್. ಭೃಂಗೀಶ್ ಹಾಗೂ ಇಲಾಖೆಯ ಹಿರಿಯ ಉಪ ನಿರ್ದೇಶಕ ಶ್ರೀ ಹೆಚ್. ಬಿ. ದಿನೇಶ್ ಅವರುಗಳು ಉಪಸ್ಥಿತರಿದ್ದರು.

ಸಮ/ಬಾಬು/ಕೆಎಂ

## ಹಿಂದುಳಿದ ವರ್ಗಗಳ ಆಯೋಗದ ಸದಸ್ಯರಾಗಿ ಶ್ರೀ ಜಿ.ಡಿ. ಗೋಪಾಲ್

ಬೆಂಗಳೂರು, 28 ನೇ ನವೆಂಬರ್ (ಕರ್ನಾಟಕ ವಾರ್ತೆ)

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಸದಸ್ಯರಾಗಿ ಶ್ರೀ ಜಿ.ಡಿ. ಗೋಪಾಲ್ ತಂದೆ ದಿ: ದೊಡ್ಡ ಶೆಟ್ಟಿ, ಬೆಂಗಳೂರು ನೇಮಿಸಲಾಗಿದೆ.

## ಅಧಿಕಾರ ಸ್ವೀಕಾರ

ಬೆಂಗಳೂರು, 28 ನೇ ನವೆಂಬರ್ (ಕರ್ನಾಟಕ ವಾರ್ತೆ)

ಡಾ: ಬಾಬು ಜಗಜೀವನರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿ ಶ್ರೀ ಆರ್. ರಾಮಕೃಷ್ಣ ಅವರು ಅಧಿಕಾರವಹಿಸಿಕೊಂಡಿರುತ್ತಾರೆ.

ಛಾಯಾಚಿತ್ರ ಲಗತ್ತಿಸಿದೆ)

ಸಮ/ಬಾಬು/ಕೆಎಂ

# ಬೇಕರಿ ತರಬೇತಿ

ಬೆಂಗಳೂರು ನವೆಂಬರ್ 28(ಕರ್ನಾಟಕ ವಾರ್ತೆ) :

ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಬೇಕರಿ ತರಬೇತಿ ಘಟಕದ ವತಿಯಿಂದ 4 ವಾರಗಳ ಬೇಕರಿ ತರಬೇತಿ ಕಾರ್ಯಕ್ರಮವನ್ನು ಆಸಕ್ತಿಯುಳ್ಳ ಬೇಕರಿ ಉದ್ದಿಮೆದಾರರಿಗೆ ಮತ್ತು ಗೃಹಣಿಯರಿಗಾಗಿ ಆಯೋಜಿಸಲಾಗಿದೆ. ತರಬೇತಿಯು ದಿನಾಂಕ 01-12-2014 ರಿಂದ ಪ್ರಾರಂಭವಾಗಲಿದೆ. ಈ ತರಬೇತಿಯಲ್ಲಿ ಬ್ರೆಡ್,ಬನ್, ಪಫ್ಸ್, ಕೇಕ್‌ಗಳು, ವಿಶೇಷ ಬಿಸ್ಕತ್ತುಗಳು, ರೋಲ್ಸ್‌ಗಳು, ಮತ್ತಿತರ ಆಕರ್ಷಕ ಬೇಕರಿ

ಪದಾರ್ಥಗಳನ್ನು ತಯಾರಿಸಲಾಗುವುದು. ಅಭ್ಯರ್ಥಿಗಳು ಸ್ವತ: ಪದಾರ್ಥ ತಯಾರಿಸುವ ಮೂಲಕ ಕಲಿಯುವ ಸೌಲಭ್ಯವಿದೆ.

ಹೆಚ್ಚಿನ ವಿವರಗಳಿಗೆ ಸಂಯೋಜಕರು, ಬೇಕರಿ ತರಬೇತಿ ಕೇಂದ್ರ ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ, ಹೆಬ್ಬಾಳ, ಬೆಂಗಳೂರು 560 024 ಇವರನ್ನು ಖುದ್ದಾಗಿ ಅಥವಾ ದೂರವಾಣಿ ಸಂಖ್ಯೆ 080– 23513370 ಮೂಲಕ ಸಂಪರ್ಕಿಸಬಹುದು.

ಸಮ/ಬಾಬು/ಕೆಎಂ

## Bakery Course

Bangalore, November 28 (Karnataka Information)

The Bakery Training Unit, Hebbal, Bangalore is conducting 4 weeks training course on Bakery Technology for the benefit of Housewives and Entrepreneurs from 1st December 2014. Bakery products like special Biscuits, Bread Rolls, Cakes and fancy items will be taught during the course. Participants will be allowed to learn by preparing the products by themselves. The interested persons can contact Coordinator in person or through telephone no. 23513370, says a press release issued by University of Agricultural Sciences Bangalore.

ಸಮ/ಬಾಬು/ಕೆಎಂ

## ಅಧಿಕಾರ ಸ್ವೀಕಾರ

ಬೆಂಗಳೂರು, 28 ನೇ ನವೆಂಬರ್ (ಕರ್ನಾಟಕ ವಾರ್ತೆ)

ಶ್ರೀ ಸುಭಾಸ. ಎಸ್. ಛಾಯಾಗೋಳ, ಬಿ.ಎ, .ಎಲ್.ಎಲ್.ಬಿ, ವಕೀಲರು, ಕೋರವಾರ ಗ್ರಾಮ ಸಿಂಧಗಿ ತಾಲೂಕು ವಿಜಯಪುರ ಜಿಲ್ಲೆ ಇವರು **ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ** ದಿನಾಂಕ 27–11–2014 ರಂದು ಅಧಿಕಾರ ವಹಿಸಿಕೊಂಡಿರುತ್ತಾರೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

ಛಾಯಾಚಿತ್ರ:

**Food and Civil Supplies**

ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮದ ಅಧ್ಯಕ್ಷರಾಗಿ ಶ್ರೀ ಎಸ್.ಎಂ. ಆನಂದ, ಹಾಸನ ಮತ್ತು ಉಪಾಧ್ಯಕ್ಷರಾಗಿ ಶ್ರೀ ಮೋಹನ್ ವಿ ಅಸುಂಡಿ, ಧಾರವಾಡ ಜಿಲ್ಲೆ ಇವರು ಇಂದು ಅಧಿಕಾರ ಸ್ವೀಕರಿಸಿದರು.

Photo; DSC_0658

Award for Safety in our Hands !

Police Commissioner, Bangalore City,Mr M N Reddy received Award in New Delhi on November-28, for the best initiatives in Road Safety in Urban Transport,from the Union Minister of State for Urban Development,Mr Babul Supriyo.

Additional Commissioner of Police,Traffic, Mr B Dayananda is also seen in the picture.

Photo Caption dSC 0715

We are the best !

The Karnataka Minister for Transport,Mr Ramalinga Reddy received "Award of Excellence" from the Union Minister of State for Urban Development Mr Babul Supriyo,in New Delhi on November-28.The Managing Director KSRTC,Mr Rajender Kumar Kataria,Dr. Ekroop Caur, Managing Director BMTC,Mr. G.N Shivamurthy, Managing Director, NEKRTC and PRO,KSRTC,Mrs Latha and other officials are also seen in the picture.

KSRTC, BMTC & NEKRTC bagged National Award, "Award of Excellence" by Ministry of Urban Development , Govt.of India. the award
ceremony was organised
at Manekshaw Centre (Zoravar Hall), Parade Road, New Delhi.

1) KSRTC bagged award for Intelligent Transport System Project,
2)BMTC for City bus service for inclusive development category,
3) NEKRTC for Best City bus services.

KSRTC winning this award 5th time in a row. NEKRTC is the first time winning this award.out of 10 awards, 3 awards bagged by Karnataka STUs.